ಅಧ್ಯಕ್ಷರು : ಈಗ ಗಮನಸೆಳೆಯುವ ಸೂಚನೆಯ ಅಡಿಯಲ್ಲಿ ಮಾನ್ಯ ಶ್ರೀ ಎಂ.ಟಿ. ಕೃಷ್ಣಪ್ಪನವರು, ಎಂ. ಶ್ರೀನಿವಾಸ್‌ರವರು, ಡಾ: ಕೆ. ಅನ್ನದಾನಿಯವರು ಹಾಗೂ ಹೆಚ್. ನಿಂಗಪ್ಪನವರು ಮತ್ತು ಬಹಳ ಸದಸ್ಯರು ಹಲವಾರು ವಿಚಾರವನ್ನು ಹಾಕಿ ಮೂರ್‍ನಾಲ್ಕು ದಿವಸಗಳಿಂದ ಕಾದಿದ್ದಾರೆ. ಆದರೆ ಹೀಗಾದರೆ ಹೇಗೆ?

ಮಾನ್ಯ ಸದಸ್ಯರು : ನನಗೆ ಅವಕಾಶ ...

ಅಧ್ಯಕ್ಷರು : ಕೊಡುತ್ತೇನೆ, ಆದರೆ ಈಗಾಗಲೇ ಸಾಕಷ್ಟು ಸಮಯವಾಗಿದೆ. ಒಂದು ಗಂಟೆಯಾಯಿತು. ಕೊಡುತ್ತೇನೆ.

ಗೊಂದಲ

ಅಧ್ಯಕ್ಷರು : ನೀವುಗಳು ಈ ರೀತಿ ಮಾಡಿದರೆ ಯಾವುದನ್ನೂ ಕೇಳಲು ಸಾಧ್ಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೇರೆ ವಿಚಾರಗಳು ಇವೆ ಸಾರ್.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಎರಡುಮೂರು ವಿಚಾರಗಳನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಬೇರೆ ವಿಚಾರಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ನಿಮ್ಮ ಹತ್ತಿರ ಬಂದು ಅನುಮತಿಯನ್ನು ತೆಗೆದುಕೊಂಡೇ ಬಂದೆವಲ್ಲಾ.

ಅಧ್ಯಕ್ಷರು : ನೀವೆಲ್ಲರೂ ಸಹ ತಮ್ಮ ತಮ್ಮ ವಿಚಾರಗಳನ್ನು ಶೂನ್ಯವೇಳೆಯಲ್ಲಿ ಎತ್ತುತ್ತೇವೆಂದರೆ ಇಡೀ ದಿನ ಶೂನ್ಯ ವೇಳೆಯನ್ನೇ ನಡೆಸಬೇಕಾಗುತ್ತದೆ. ಆದ್ದರಿಂದ ಅದಕ್ಕೆಲ್ಲ ಅವಕಾಶವಾಗುವುದಿಲ್ಲ. ದಯಮಾಡಿ ಸಹಕರಿಸಿ. ಈಗ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಕೃಷ್ಣಪ್ಪನವರು, ಎಂ. ಶ್ರೀನಿವಾಸ್‌ರವರು.....

ಶ್ರೀ ಶಿವಾನಂದನಾಯ್ಕ : ಮಾನ್ಯ ಅಧ್ಯಕ್ಷರೆ, ಬಟ್ಕಳದ ವಿಚಾರದ ಬಗ್ಗೆ.....

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಬಟ್ಕಳದ ಕೊಲೆ ವಿಚಾರದ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ತಮ್ಮ ಕೊಠಡಿಗೆ ನಾವು ಬರುತ್ತೇವೆ.

ಗೊಂದಲ

ಅಧ್ಯಕ್ಷರು : ನನ್ನ ಕಷ್ಟವನ್ನೂ ನೀವು ಕೇಳಿ. ನಮ್ಮ ಕಷ್ಟವನ್ನು ಕೇಳಬೇಕಲ್ಲಾ? ಅನೇಕ ಸೂಚನೆಗಳನ್ನು ಕೊಟ್ಟು ಕಾಯುತ್ತಿದ್ದಾರೆ. ಶೂನ್ಯವೇಳೆಗೆ ಎರಡು ಗಂಟೆ ಕೊಡಬೇಕೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡು ಗಂಟೆ ಬೇಡ, ಒಂದು ಅರ್ಧ ಗಂಟೆ ಕೊಡಿ ಸಾಕು.

ಅಧ್ಯಕ್ಷರು : ಈಗ ಎಷ್ಟು ಗಂಟೆಯಾಗಿದೆ ನೋಡಿ?

(ಇ) 2-5-2004ರಂದು ತಿಮ್ಮಪ್ಪನಾಯ್ಕರ ಹತ್ಯೆಯಾಗಿರುವ ಬಗ್ಗೆ

ಶ್ರೀ ಶಿವಾನಂದನಾಯ್ಕ : ಭಟ್ಕಳದ ತಿಮ್ಮಪ್ಪನಾಯ್ಕನ ಕೊಲೆ ವಿಚಾರ ಬಹಳ ಪ್ರಮುಖವಾದಂಥ ವಿಷಯ.

ಗೊಂದಲ

ಅಧ್ಯಕ್ಷರು : ಮಾನ್ಯ ಶಿವಾನಂದ ನಾಯಕರೇ, ಈ ರೀತಿ ವೆಲ್ಲಿಗೆ ಬರುವುದು ಬಹಳ ಕೆಟ್ಟ ಸಂಪ್ರದಾಯ. ತಾವು ಮೊದಲು ತಮ್ಮ ಸ್ಥಾನಕ್ಕೆ ಹೋಗಿ. ಅನಂತರ ಕೇಳಿ. ಅದನ್ನು ಬಿಟ್ಟು ಎಲ್ಲರೂ ವೆಲ್ಲಿಗೆ ಬರುವುದನ್ನು ಕಲಿತುಕೊಂಡು ಬಿಟ್ಟಿರಲ್ಲಾ? ನಾವು ಈ ರೀತಿಯೆಲ್ಲ ಆಗಬಾರದೆಂದು ತಮಗೆಲ್ಲಾ ರಿಫ್ರೆಶ್‌ಮೆಂಟ್ ಕೋರ್ಸ್ ಮಾಡಿದ್ದೇವೆ. ಹೊಸಬರೆಲ್ಲಾ ಈ ರೀತಿ ಕಲಿತುಕೊಂಡುಬಿಟ್ಟರೆ ಹೇಗೆ?

(ಶ್ರೀ ಶಿವಾನಂದನಾಯಕ್: ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ನಿಮ್ಮ ಕೊಠಡಿಗೆ ಬಂದು ರಿಕ್ವೆಸ್ಟ್ ಮಾಡಿಕೊಂಡಿದ್ದರು. ಇದು ಕೊಲೆ ಪ್ರಕರಣ, ಅವರ ಕ್ಷೇತ್ರದಲ್ಲಿ ಅವರು ಮುಖ ತೋರಿಸುವುದು ಹೇಗೆ?

ಅಧ್ಯಕ್ಷರು : ತಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆಯಾದರೂ ಬೇರೆ ಯಾವುದಾದರು ಮೂಲಕ ಅವರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಈಗಲೇ ಕೊಡುತ್ತೇನೆ ಬಿಡಿ. ಶಿವಾನಂದನಾಯಕರೇ, ತಾವು ಹೇಳಿ.

ಶ್ರೀ ಶಿವಾನಂದನಾಯಕ್ (ಭಟ್ಕಳ್) : ಮಾನ್ಯ ಅಧ್ಯಕ್ಷರೆ, ತುಂಬಾ ನೋವಿನಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸದನಕ್ಕೆ ಬಂದ ಮೇಲೆ ನಾಲ್ಕನೆ ಬಾರಿ ತಮಗೆ ನೋಟೀಸ್ ಕೊಟ್ಟಿದ್ದೇನೆ. ತಾವು ಇವತ್ತು ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಭಟ್ಕಳ ಜನತೆಯ ಕಣ್ಣೀರಿನ ಕತೆ. ಭಟ್ಕಳದ 20ನೇ ಕೊಲೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. 1993ರಲ್ಲಿ ಹತ್ತು ತಿಂಗಳ ಕಾಲ ಅಲ್ಲಿ ಕೋಮುಗಲಭೆ ನಡೆದಿತ್ತು. ಆಗ ಹದಿನೆಂಟು ಜನರ ಕೋಲೆಯಾಗಿತ್ತು. ಒಬ್ಬರೇ ಒಬ್ಬ ಆರೋಪಿಯನ್ನು ಪತ್ತೆ ಹಚ್ಚಲಿಲ್ಲ. ಇದೇ ಮನೆಯ ಸದಸ್ಯರಾಗಿದ್ದಂಥ ಡಾ: ಚಿತ್ತರಂಜನ್ ರವರ ಹತ್ಯೆ 19ನೇ ಕೊಲೆಯಾಯಿತು. ಅದನ್ನೂ ಸಹ...

ಅಧ್ಯಕ್ಷರು : ಮಾನ್ಯ ನಾಯಕರೇ, ನೀವು ಕೇಳಿರುವ ತಿಮ್ಮಪ್ಪನಾಯಕರ ಬಗ್ಗೆ ಪ್ರಸ್ತಾಪ ಮಾಡಿ, ಉಳಿದುದರ ಬಗ್ಗೆ ಪೀಠಿಕೆ ಬೇಡ. ಇದು ಶೂನ್ಯ ವೇಳೆ.

ಶ್ರೀ ಶಿವಾನಂದನಾಯ್ಕ : ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭಟ್ಕಳದ ಕರ್ಮ ಕತೆಯನ್ನು ಅವರು ಹೇಳುತ್ತಿದ್ದಾರೆ. ಸ್ವಲ್ಪ ಪೀಠಿಕೆ ಬೇಡವೆ?

ಅಧ್ಯಕ್ಷರು : ಕರ್ಮಕತೆಯನ್ನು ಕೇಳುವುದಕ್ಕೇ ಒಂದು ಗಂಟೆಯಾಗುತ್ತದೆ. ಅದನ್ನು ಶೂನ್ಯ ವೇಳೆಯಲ್ಲಿ ಮಾಡಲು ಆಗುತ್ತದೆಯೇ? ತಿಮ್ಮಪ್ಪನಾಯ್ಕರ ಬಗ್ಗೆ ಕೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭಟ್ಕಳದ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ತಮ್ಮ ಮನವೊಲಿಸುವಂಥ ಪ್ರಯತ್ನ ಮಾಡುತ್ತಿದ್ದಾರೆ.

ಅಧ್ಯಕ್ಷರು : I can't understand. ಈ ರೀತಿಯಾದರೆ ಸದನವನ್ನು ನಡೆಸುವುದು ಕಷ್ಟವಾಗುತ್ತದೆ. ತಿಮ್ಮಪ್ಪನಾಯ್ಕರ ಬಗ್ಗೆ ಹೇಳಲಿ.

ಶ್ರೀ ಶಿವಾನಂದನಾಯಕ್ : ಈ ಮನೆಯ ಸದಸ್ಯರಾಗಿದ್ದ ಡಾ: ಚಿತ್ತರಂಜನ್‌ರವರ ಕೊಲೆಯಾಯಿತು. ಅದನ್ನು ಪತ್ತೆ ಮಾಡಲಿಲ್ಲ. ಈಗ ತಿಮ್ಮಪ್ಪನಾಯ್ಕರ ಹತ್ಯೆ 2–5–2004 ರಂದು

ರಾತ್ರಿ 10–30ಕ್ಕೆ ಆಯಿತು. ಹತ್ಯೆಯಾಗಿ ಎರಡೂವರೆ ತಿಂಗಳುಗಳಾದರೂ ಇದುವರೆಗೆ ತಮ್ಮ ಪೊಲೀಸರು ಯಾವುದೇ ರೀತಿಯ ಸುಳಿವನ್ನು ಪತ್ತೆ ಮಾಡಲಿಲ್ಲ. ಮೊನ್ನೆ 24ರಂದು ಯಾರೊ ಒಬ್ಬರನ್ನು ಸಂಶಯದ ಆಧಾರದ ಮೇಲೆ ಬಂಧಿಸಿದ್ದೇವೆಂದು ಪತ್ರಿಕೆಯಲ್ಲಿ ಬಂತು. ಅನಂತರ ಏನಾಯಿತೊ ಗೊತ್ತಿಲ್ಲ. ಪೊಲೀಸ್ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಯವರನ್ನು ಸಂಪರ್ಕ ಮಾಡಿದಾಗ ನಾವು ಪತ್ತೆ ಮಾಡುತ್ತೇವೆ, ಕೆಲಸ ಮಾಡುತ್ತೇವೆ ಎಂಬ ಸುಳ್ಳು ಭರವಸೆಯನ್ನು ಕೊಡುತ್ತಿದ್ದಾರೆ, ಯಾವ ಹಂತದಲ್ಲಿ ಅದು ಇದೆ? ಯಾವಾಗ ಪತ್ತೆಹಚ್ಚುತ್ತೀರಿ? ಏನುಮಾಡುತ್ತೀರಿ? ನಾನು ತುಂಬ ನೋವಿನಿಂದ ಹೇಳುತ್ತಿದ್ದೇನೆ. ವಿವರಣೆ ಕೊಡೋಣ ಎಂದರೆ ಭಾಷಣ ಮಾಡಬಾರದು ಎಂದು ಹೇಳುತ್ತೀರಿ, ಆದರೆ ನಾವು ವಿಷಯವನ್ನು ಪ್ರಸ್ತಾಪ ಮಾಡಲೇಬೇಕಾಗಿದೆ. ಭಟ್ಕಳದಲ್ಲಿ 20 ಜನರ ಹತ್ಯೆಯಾಗಿದೆ, ಆದರೆ ಇದುವರೆಗೆ ಒಬ್ಬರನ್ನೂ ಪತ್ತೆಹಚ್ಚಲಿಲ್ಲ. ಸರ್ಕಾರ ಏನುಮಾಡುತ್ತಿದೆ? ಭಟ್ಕಳದಲ್ಲಿ ಈ ರೀತಿ ಆಗಾಗ್ಗೆ ಕೊಲೆಯಾಗುತ್ತಿದ್ದರೆ, ಯಾರೇ ಒಬ್ಬರು ಕೊಲೆಗಡುಕರನ್ನು ಪತ್ತೆಹಚ್ಚಲಿಲ್ಲವೆಂದರೆ ಸರ್ಕಾರವೇನು ಮಾಡುತ್ತಿದೆ? ಇದಕ್ಕೆ ಸಂಬಂಧಪಟ್ಟ ಜಗನ್ನಾಥಶೆಟ್ಟಿ ಆಯೋಗ ಮತ್ತು ರಾಮಚಂದ್ರ ಆಯೋಗವೆಂದು ಎರಡು ಆಯೋಗವನ್ನು ರಚನೆ ಮಾಡಿ ಆ ವರದಿಯನ್ನು ಸದನಕ್ಕೆ ಕೊಟ್ಟು ಆರು ವರ್ಷಗಳಾಯಿತು. ಆ ವರದಿಯನ್ನು ಮುಚ್ಚಿಟ್ಟಿದ್ದೀರಿ, ಕೊಲೆಗಡುಕರನ್ನು ಬಚ್ಚಿಟ್ಟಿದ್ದೀರಿ, ಆದ್ದರಿಂದ ಭಟ್ಕಳದಲ್ಲಿ ಆಗಾಗ್ಗೆ ಕೊಲೆಯಾಗುತ್ತಿದೆ, ಆದ್ದರಿಂದ ಸರ್ಕಾರ ತಕ್ಷಣ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಮನಸ್ಸಿಗೆ ನೋವಾಗಿದ್ದರೆ, ತಮಗೆ ನೋವನ್ನು ಮಾಡಬೇಕು ಎಂಬ ಅಪೇಕ್ಷೆ ನಮಗಿಲ್ಲ. ಆ ಕ್ಷೇತ್ರದ ಶಾಸಕರಾದ ಶಿವಾನಂದನಾಯ್ಕರ ನೋವನ್ನು, ಆ ಭಾವನೆಯನ್ನು ತಾವು ಹಾಗೂ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ನಿರಂತರವಾಗಿ...

ಅಧ್ಯಕ್ಷರು : ನಾನು ಅರ್ಥ ಮಾಡಿಕೊಂಡಿರುವುದರಿಂದಲೇ ಅವಕಾಶ ಮಾಡಿಕೊಟ್ಟಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ತಾವು ಅವಕಾಶ ಕೊಟ್ಟಿದ್ದೀರಿ. ಇದು ಸರಿಯಿದೆ, actually ಇದನ್ನು ಬೇರೆ ಒಂದು ರೂಲ್ಸ್ ಚೌಕಟ್ಟಿನಲ್ಲಿ ಕನ್‌ವರ್ಟ್ ಮಾಡಿ ಬೇಕಾದರೂ ಚರ್ಚೆಗೆ ಅವಕಾಶ ಮಾಡಿಕೊಡಿ. ತಿಮ್ಮಪ್ಪನಾಯ್ಕನ ಕೊಲೆಯಾದಾಗ ನಾನು ಹೋಗಿ ಏನಾಯಿತು ಎಂದು ನೋಡಿಕೊಂಡು ಬಂದೆ. ಇದುವರೆಗೆ ಅಪರಾಧಿಗಳು ಯಾರು ಎಂದು ಗೊತ್ತಿದ್ದರು ಅವರನ್ನು ಹಿಡಿಯುವಂಥ ಪ್ರಯತ್ನವಾಗಲಿಲ್ಲ. ಪೊಲೀಸ್ ಅಧಿಕಾರಿಗಳ ಹತ್ತಿರ ಎಲ್ಲಾ ವಿವರಗಳು ಇದೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಇನ್ನೊಂದು ಇದೇ ರೀತಿ ನಮ್ಮ ಮಾನ್ಯ ಜಯಪ್ರಕಾಶ್‌ಹೆಗ್ಡೆಯವರು ಕೇಳಿದ್ದಾರೆ. ಇದರ ಬಗ್ಗೆ ತಾವು ಏನಾದರೂ ನೋಟೀಸ್ ಕೊಟ್ಟರೆ ಬೇರೆ ನಿಯಮಾವಳಿಗಳ ಅಡಿಯಲ್ಲಿ ಚರ್ಚೆಯಾಗಲಿ, ಎಷ್ಟು ಕೇಸು ಈ ರೀತಿ ಪೆಂಡಿಂಗ್ ಆಗಿದೆ? ಏತಕ್ಕಾಗಿ ಇದೆ ಎಂಬ ಬಗ್ಗೆ ಚರ್ಚೆಯಾಗಲಿ. ತಾವು ಬೇರೆ ನೋಟೀಸ್ ಕೊಡಿ. ಅದನ್ನು ಮಾಡೋಣ.

ಶ್ರೀ ಶಿವಾನಂದನಾಯಕ್ : ಇದಕ್ಕೆ ಈಗ ಉತ್ತರವನ್ನು ಕೊಡಬೇಕಲ್ಲಾ?

ಅಧ್ಯಕ್ಷರು : ತಮ್ಮ ನಾಯಕರು ಹೇಳಿದ್ದಾರಲ್ಲಾ, ಸಂಬಂಧಪಟ್ಟ ಸಚಿವರು ಇಲ್ಲವೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದನಾಯಕ್‌ರವರು ಎತ್ತಿರುವ ಪ್ರಮುಖವಾದ ಪ್ರಶ್ನೆಗೆ ಈ ದಿವಸ ಸಾಯಂಕಾಲ ಅಥವಾ ನಾಳೆ ನಾವು ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ.